

## ಇಲ್ಲಿಯವರೆಗೆ

ಗಂಡನ ಮನೆಯವರು ವಂಶೋದ್ಧಾರಕ್ಕಾಗಿ ಗಂಡು ಮಗುವನ್ನೇ ಅಪೇಕ್ಷಿಸಿದಾಗ ಆಕೆಗೆ ಬೇಸರವೆನಿಸತು. ಹುಟ್ಟುವ ಮಗು ಗಂಡಾಗದಿರಲಿ ಎಂಬ ಅವಳ ಆಶಯ ಫಲಿಸಲೇ ಇಲ್ಲ. ಅದಾಗಿ ಮಗುವಿನ ಅಜ್ಜ ಅಜ್ಜಿಯರು ಸಾಂಪ್ರದಾಯಿಕವಾಗಿ ಕನಕಾಭಿಷೇಕ ಮಾಡಿಸಿಕೊಂಡರು. ಮಗ ರಾಹುಲ್ ಹುಟ್ಟಿ ಎರಡು ವರ್ಷದೊಳಗೆ ರಾಧಿಕಾಳ ಆಗಮನವಾಗುತ್ತದೆ. ತವರಿಗೆ ಹೋದ ಅವಳಿಗೆ ತಾಯಿ ಮನೆಯವರು 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಸೂತ್ರ ಪಾಲಿಸಿ ಇಲ್ಲಿಗೆ ಬರಬೇಡ ಎಂದು ಸೂಚ್ಯವಾಗಿ ಹೇಳುತ್ತಾರೆ. ಅವಳಿಗೆ ಬೇಸರವಾಗಿ ಸ್ತ್ರೀಶಕ್ತಿ ಸಂಘ ಸ್ಥಾಪಿಸಿ ಬೊಂಬೆ ಮಾಡುವ ಕೆಲಸ ಶುರು ಮಾಡುತ್ತಾಳೆ. ಗಂಡ ಎಲೆಕ್ಷನ್‌ನಲ್ಲಿ ಸ್ಪರ್ಧಿಸುವ ನಿರ್ಧಾರ ಈಕೆಗೆ ಸರಿ ಕಾಣುವುದಿಲ್ಲ.

ಎರಡನೇ ಹೆಂಡತೀನಾ?...

ಕಣ್ಣರಳಿಸಿ ಅವನತ್ತ ನೋಡಿದೆ... ಉತ್ತರದ ನಿರೀಕ್ಷೆಯಿಲ್ಲ.. ಭಾವಚಿತ್ರ ನೋಡುತ್ತಾ ಮಾತಾಡುತ್ತಿದ್ದಾನೆ.. ನನ್ನತ್ತ ನೋಡುತ್ತಲ್ಲೂ ಇಲ್ಲ..

ಈ ಹುಡುಗನ್ನ ನೋಡಿದರೆ.. ನಿಮ್ಮ ತಮ್ಮ ಅನ್ನಬಹುದಲ್ರೀ.. ಏನು ಸ್ಕೂಲಿಗೆ ಹೋಗ್ತಾ ಇದ್ದವರನ್ನ ಎಗರಿಸಿಕೊಂಡು ಬಂದು ಮದ್ವೆಯಾಗಿಬಿಟ್ರಾ ನಿಮ್ಮ ಯಜಮಾನರು?... ಕ್ರೇಡಲ್ ಸ್ನ್ಯಾಚಿಂಗ್ ಅಂತಾರ್‍ರೀ..

ನಾಳೆಯಿಂದ ಕ್ಲಾಸು.. ನಿಮ್ಮ ಹೊಟೇಲ್‌ಗೆ ಬಿಡ್ತಾ ದಾರೀಲಿ ಶಾಲೇನ ತೋರಿಸೋಕೆ ನಮ್ಮ ಡ್ರೈವರ್‌ಗೆ ಹೇಳ್ತೀನಿ.. ಹದಿನೈದು ಮಂದಿ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ.. ಬೆಳಗ್ಗೆ ಎಲ್ಲಾ ನೀವು ಫ್ರೀ.. ಮೂರರಿಂದ ಏಳರವರೆಗೆ ಕ್ಲಾಸು ಅಂತ ಅನೌನ್ಸ್ ಮಾಡಿದ್ದೀನಿ..

ಇವನು ಹೋದರೆ ಸಾಕು.. ಇವನು ಆಡುತ್ತಿರುವ ಮಾತುಗಳು ಅತ್ತೆಯ ಕಿವಿಗೆ ಬಿದ್ದರೆ ಆಯಿತು. ಆದರೂ ನೋಡಿ ಇಪ್ಪತ್ತು ನಿಮಿಷವಾಗಿಲ್ಲ.. ಆಗಲೇ ಎಷ್ಟೊಂದು ಸಲಿಗೆ ತೋರುತ್ತಾನೆ.

ಓಕೆ ಅರ್ಥ ಆಯ್ತು.. ಹೊರಡ್ತೀನಿ ನೀವು ಬೊಂಬೆ ಮಾಡೋದು ಕಲಿತುಕೊಳಲ್ವಾ?.. ಅಂ ... ಅಬ್ಬ.. ಎಷ್ಟೊಂದು ಧಾರ್ಷ್ಟಿಕ..

ಓ.. ಸರಿ ಬಿಡಿ.. ನೀವೇ ಬೊಂಬೆ ತರಹ ಇದ್ದೀರ. ಬೊಂಬೆ ಮಾಡೋ ಕೆಲಸ, ಹವ್ಯಾಸ ನಿಮಗ್ಯಾಕೆ?

ಡ್ರೈವರ್‌ಗೆ ನಿಮ್ಮನ್ನು ಹೋಟೆಲ್ಲಿಗೆ ಬಿಟ್ಟು ಬರಲು ಹೇಳ್ತೀನಿ.. ದಾರೀಲೇ ಶಾಲೆಯಿದೆ. ನಿಮ್ಮ ಹೋಟೆಲ್‌ನಿಂದ ನಡೆದೇ ಹೋಗಿ ಬಂದು ಮಾಡ ಬಹುದು. ಅದನ್ನೂ ತೋರಿಸ್ತಾನೆ... ಹಾಲಿನಿಂದ ಆಚೆ ನಡೆದೆ.

ನನ್ನ ಹಿಂದೆಯೇ ಬಂದ ವಿಶ್ವಾಸ್ ಯಾಕೆ ಮೇಡಂ?.. ನನ್ನ ಮಾತು ಬೇಜಾರಾಯ್ತಾ?... ನೀವು ತುಂಬಾ ಫ್ರೆಂಡ್ಲಿ ಅಂದ್ರು ಪ್ರೀತಿ.. ಇಷ್ಟು ದೊಡ್ಡ ಬಂಗಲೆಯಿದೆ. ಇಲ್ಲೇ ಒಂದು ರೂಮು ಕೊಟ್ಬಿದ್ರೆ.. ಬೆಳಿಗ್ಗೆಯೆಲ್ಲಾ ನಿಮ್ಮ ಮಕ್ಕಳ ಜೊತೆ ಆಟ ಆಡಿಕೊಂಡು ಇರುತ್ತಿದ್ದೆ..

ಅವನಿಗೆ ಉತ್ತರಿಸದೆ ಆಚೆ ಪೋರ್ಟಿಕೋಗಿ ಬಂದು ಡ್ರೈವರ್‌ಅನ್ನು ಕೂಗಿದೆ.

ಇವರಿಗೆ ಶಾಲೆ ತೋರಿಸಿ ಹೋಟೆಲಲ್ಲಿ ಬಿಟ್ಟು ಬಾ.. ಅಲ್ಲಿ ರಿಸೆಪ್ಷನ್ನಿನಲ್ಲಿ ಸ್ತ್ರೀಶಕ್ತಿಯಿಂದ ಅಂತ ಹೇಳು.. ವಿಶ್ವಾಸ್.. ನಾಳೆ ಮಧ್ಯಾಹ್ನ ಮೂರು ಗಂಟೆ ಶಾಲೆ ಹತ್ತಿರ ಬನ್ನಿ. ಶಿವಪ್ಪ ಈ ಸೂಟ್ ಕೇಸ್ ತೊಗೊಂಡು ಕಾರಲ್ಲಿ ಇಟ್ಕೊ..

ಬಸ್ ಸ್ಟ್ಯಾಂಡಿನಲ್ಲಿ ಎರಡು ಮೂಟೆ ಬೊಂಬೆಯ ಸಾಮಾನು ಇದೆ, ಅದನ್ನು ತೊಗೊಂಡು, ನಂತರ ರೂಮಿಗೆ.. ನಾಳೆ ಸಿಗ್ತೀನಿ. ನಿಮ್ಮ ಮೊಬೈಲ್ ನಂಬರ್ ಕೊಡ್ರೀ.. ಜೇಬಿನಿಂದ ಮೊಬೈಲ್ ತೆಗೆದು ನನ್ನತ್ತ ನೋಡಿದ.

ನನ್ನ ಹತ್ತಿರ ಮೊಬೈಲ್ ಫೋನ್ ಇಲ್ಲ..

ಅಚ್ಚರಿಯಿಂದ ಅವನ ಹುಬ್ಬುಗಳು ಮೇಲೇರಿದವು.

ಮೊಬೈಲ್ ಇಲ್ವಾ!... ಬಡತನ ರೀ!.. ಲ್ಯಾಂಡ್‌ಲೈನ್ ನಂಬರ್ ಕೊಡಿ...

ಎರಡು ಎರಡು, ಮೂರು,ಎಂಟು ಸೊನ್ನೆ

ಹೇಗೆ ತಪ್ಪಿಸಿಕೊಳ್ಳುವುದು ಎಂದು ಯೋಚಿಸಿರುವಂತೆಯೇ..ಡ್ರೈವರ್ ಶಿವಪ್ಪ ನಂಬರ್ ಹೇಳಿಯಾಗಿತ್ತು.

ಥ್ಯಾಂಕ್ಸ್ ಶಿವಪ್ಪ.. ನಡಿಯಪ್ಪ ಹೋಗೋಣ.. ದಾರೀಲಿ ಮಾತಾಡಿದರಾಯಿತು.. ಡ್ರೈವರ್‍ರಿನ ಭುಜ ಬಳಸಿ ನಡೆದ ಹೋದ ವಿಶ್ವಾಸನ ಬೆನ್ನನ್ನು ಅಚ್ಚರಿಯಿಂದ ನೋಡಿದೆ.

ಅಷ್ಟು ಸಲಿಗೆಯಿಂದ ಮಾತಾಡಿದವ ಒಮ್ಮೆಯೂ ಹಿಂತಿರುಗಿ ನೋಡಲಿಲ್ಲ. ಹಿಂತಿರುಗಿ ನೋಡಲಿ ಎಂಬ ಆಸೆ ನನಗಿತ್ತಾ? ತಲೆ ಕೊಡವಿ ಮನೆಯೊಳಗೆ ನಡೆದೆ.

* * *

ಚುನಾವಣೆ ಸಲುವಾಗಿ ಪತ್ರಿಕಾಗೋಷ್ಠಿ

ರಾತ್ರಿ ಮನೆಗೇ ಬರಲಿಲ್ಲ ಇವರು. ಬೆಂಗಳೂರಿನಲ್ಲೇ ಉಳಿದುಕೊಳ್ಳುತ್ತಿದ್ದೇನೆ ಎಂದು ಕರೆ ಅಷ್ಟೇ... ಅದೂ ನನಗೇ ಹೇಳಬೇಕೆಂದಿಲ್ಲ. ಯಾರು ಫೋನ್ ತೆಗೆದುಕೊಳ್ಳುತ್ತಾರೋ ಅವರಿಗೇ ವಿಷಯ ತಿಳಿಸಿದರಾಯಿತು.

ದೊಡ್ಡ ಮಂಚ... ಮೆತ್ತನೆಯ ಹಾಸಿಗೆ.. ಮೇಲಿನಿಂದ ಇಳಿದು ಇಡೀ ಮಂಚವನ್ನು ಆವರಿಸಿ, ನೆಲವನ್ನು ಮುಟ್ಟುವ ಸೊಳ್ಳೆಪರದೆ.. ದಿಂಬಿನ ಮೇಲೆ ತಲೆ ಇರಿಸಿದೊಡನೆ ಬರುತ್ತಿದ್ದ ನಿದ್ರೆ ಓಡಿ ಹೋಗಿಬಿಡುತ್ತದೆ.

ಎದೆ ಹಾಲು ಬಿಡಿಸುವ ನೆಪದಲ್ಲಿ ವರ್ಷ ತುಂಬುವ ಹೊತ್ತಿಗೆ ಮಕ್ಕಳು ಅಜ್ಜಿಯ ಮಗ್ಗುಲಿಗೆ... ಈಗ ಅವರಿಬ್ಬರದೇ ಬೇರೆ ಕೋಣೆ. ಕೋಣೆಯ ಬಾಗಿಲಿನಲ್ಲಿ ನಿಂಗಿ ಹಾಸಿಕೊಂಡು ಮಲಗುತ್ತಾಳೆ.. ಮಕ್ಕಳಿಗೆ ಏನಾದರೂ ಬೇಕಾದಲ್ಲಿ ಎಂದು.

ಇವರಿದ್ದರೆ ಇವರ ಸಂಗ... ಇಲ್ಲದಿದ್ದರೆ ಒಂಟಿ. ಇವರಿದ್ದರೂ ಒಂಟಿಯೇ... ದೇಹವನ್ನು ಅವರಿಗೆ ಒಪ್ಪಿಸಿದರೆ ಆಯಿತು... ಮಾನಸಿಕವಾಗಿ ಭಾಗವಹಿಸುವ ಅವಶ್ಯಕತೆಯಿಲ್ಲ.. ಹೊಸ ಹೊಸ ಗೆಳತಿಯರು.. ದೇಹ ಸುಖವನ್ನು ದುಡ್ಡಿಗಾಗಿ ಕೊಡುವವರು ಇವರಿಗಾಗಿ ನಟಿಸಬಹುದು... ಉತ್ಸಾಹ ತೋರಬಹುದು.. ಹಾಗಾಗಿ ನನ್ನ ಸಂಗ ಇವರು ಬಯಸಿ ಬರುವುದೂ ಇತ್ತೀಚೆಗೆ ಕಮ್ಮಿಯಾಗಿದೆ. ಮನೆಯೊಳಗೆ ಹೆಂಡತಿ, ಧರ್ಮಪತ್ನಿ, ಹಳ್ಳಿ ಮನೆಯ ಸೊಸೆ, ವಂಶೋದ್ಧಾರಕನನ್ನು ಹೆತ್ತ ತಾಯಿ ಅಷ್ಟೇ.

ಹಿಂದೆ ಬಂದು, ಕೇಳಿ, ಶ್ರೀಮಂತಿಕೆ ಪ್ರದರ್ಶಿಸಿ ನನ್ನ ಮದುವೆ ಮಾಡಿಕೊಂಡರು. ನಾನೂ ಪೆದ್ದಿ, ನನ್ನಂಥ ರೂಪಸಿ ಇಲ್ಲ ಎಂದು ಭ್ರಮಿಸಿ, ಇವರ ಮೋಹವನ್ನು ಪ್ರೇಮ ಎಂದು ನಂಬಿ ಮದುವೆಯಾದೆ. ರೂಪ ಕುಂದುವ ಮೊದಲೇ ಮೋಹ ಕಡಿಮೆಯಾಯಿತು. ಹೆಣ್ಣು ಗಂಡನಿಗೆ ಪ್ರೇಯಸಿ, ಮಡದಿ, ಸಂಗಾತಿ, ಮಾತೆ ಎಲ್ಲಾ ಆಗಬಹುದು. ಆದರೆ ಬರೀ ಮೋಹದಲ್ಲಿ ಬೀಳುವವನಿಗೆ ಅದರ ಅರಿವೂ ಆಗುವುದಿಲ್ಲವಲ್ಲ... ಸಂಗಾತಿಯ ಅವಶ್ಯಕತೆಯೇ ಇಲ್ಲವಲ್ಲ.. ಸದಾ ಹಿಂದೆ ಇರುವ ಸ್ನೇಹಿತರ ಹಿಂಡು.. ದುಡ್ಡಿಗಾಗಿ ಸೆರಗು ಹಾಸಲು ಸಿದ್ಧವಿರುವ ಹೆಂಗಳೆಯರ ದಂಡು, ಮಾಡಿದ್ದೆಲ್ಲವನ್ನು ಸಮರ್ಥಿಸುವ, ಧೃತರಾಷ್ಟ್ರನ ಪ್ರೇಮವನ್ನು ಮೀರಿಸುವಂತೆ ಪ್ರೀತಿಸುವ ತಂದೆ, ತಾಯಿ, ಅಜ್ಜಿ... ಇರುವಾಗ..... ಬುದ್ಧಿ ಹೇಳುವ ಮಡದಿ ಏಕೆ ಬೇಕು?.... ಏನು ಹಿತ? ಇವರು ರಾಜಕೀಯಕ್ಕೆ ಹೋಗದಂತೆ ತಡೆಯುವ ಬಗ್ಗೆ ಏನು?

ಸುತ್ತಮುತ್ತಲಿರುವವರಿಗಿಂಥ ತಾವು ಶ್ರೀಮಂತರು ಎಂಬ ಅಹಂಭಾವ ಇರುವ ಮಕ್ಕಳು... ಇನ್ನು.. ಇವರು ರಾಜಕೀಯ ಮುಖಂಡರಾದರೆ ಇವರನ್ನು ಹಿಡಿಯುವವರಿಲ್ಲ.. ಮಕ್ಕಳೂ ಕೈಗೆ ಸಿಕ್ಕುವುದಿಲ್ಲ... ಆದರೂ ಮಾನ, ಮರ್ಯಾದೆ, ಸಂಸಾರ ಎಂದು ಕಚ್ಚಿಕೊಂಡು, ಕಟ್ಟಿಕೊಂಡು ಕೂತಿರುವುದು ನನ್ನ ಭಂಡತನವೇ ಅಥವಾ ಹುಂಬತನವೇ?....

ಹೊರಳಿ ಹೊರಳಿ ಮೈ ಕೈ ನೋವು ಬಂದಿತಾಗಲೀ ನಿದ್ರೆ ಬರಲಿಲ್ಲ..

ಎದ್ದು ಟಿ.ವಿ ಆನ್ ಮಾಡಿದೆ. ಒಂದಲ್ಲ ಎರಡಲ್ಲ.. ಎಪ್ಪತ್ತೆರಡು ಚಾನೆಲ್‌ಗಳು, ಸಂಗೀತ, ಸುದ್ದಿ, ಸಿನಿಮಾ, ಸೀರಿಯಲ್, ರಿಯಾಲಿಟಿ ಶೋಗಳು